# ಕರ್ನಾಟಕದಲ್ಲಿ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರು

ಸ್ವಾಮಿ ಅಘಹರಾನಂದ

ಸ್ವಾಮೀಜಿಯವರಿಂದ ಆರಂಭಗೊಂಡು ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಹಲವರು ಕರ್ನಾಟಕದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಇಲ್ಲಿ ರಾಮಕೃಷ್ಣ ಭಾವಧಾರೆ ಹರಡುವುದಕ್ಕೆ ವಿಶೇಷವಾಗಿ ಕಾರಣೀಭೂತರಾಗಿದ್ದಾರೆ. ಈ ಬಗ್ಗೆ ಇಲ್ಲಿ ಬರೆದಿರುವ ಲೇಖಕರು ಉತ್ತಮ ಬರಹಗಾರರೂ, ಪ್ರವಚನಕಾರರೂ ಆಗಿದ್ದಾರೆ. ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಮುನ್ನುಡಿ

ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ೬ ಜನ ನೇರ ಶಿಷ್ಯಂದಿರು ಕರ್ನಾಟಕಕ್ಕೆ ಭೇಟಿ ನೀಡಿದ್ದಾರೆ. ಅವರುಗಳು ಯಾರೆಂದರೆ ಸ್ವಾಮಿ ವಿವೇಕಾನಂದರು, ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಿವಾನಂದರು, ಸ್ವಾಮಿ ರಾಮಕೃಷ್ಣಾನಂದರು, ಸ್ವಾಮಿ ಅಭೇದಾನಂದರು ಹಾಗೂ ಸ್ವಾಮಿ ವಿಜ್ಞಾನಾನಂದರು. ಈ ಮಹಾನ್ ಯತಿಗಳು ಕರ್ನಾಟಕಕ್ಕೆ ಭೇಟಿಯಿತ್ತಾಗ ಆದ ಪ್ರಮುಖ ಘಟನೆಗಳನ್ನು ಪ್ರಸ್ತುತಪಡಿಸುವುದೇ ಈ ಲೇಖನದ ಉದ್ದೇಶ.

### ಸ್ವಾಮಿ ವಿವೇಕಾನಂದರು

ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ಕೆಲವಾರು ತಿಂಗಳುಗಳ ಕಾಲ ಕರ್ನಾಟಕದಲ್ಲಿ ಇದ್ದರು. ಅಕ್ಟೋಬರ್ ೧೮೯೨ರಲ್ಲಿ ಸ್ವಾಮೀಜಿ ಬೆಳಗಾವಿಯ ಭಾಟೆಯವರ ಮನೆಯಲ್ಲಿ ೩ ದಿನಗಳ ಕಾಲ ಹಾಗೂ ಶ್ರೀ ಹರಿಪದ ಮಿತ್ರರ ಮನೆಯಲ್ಲಿ



೯ ದಿನಗಳ ಕಾಲ ತಂಗಿದ್ದರು. ಬೆಳಗಾವಿಯಿಂದ ಗೋವಾಗೆ ತೆರಳಿ, ಬಳಿಕ ನವೆಂಬರ್ ೧೮೯೨ರಲ್ಲಿ ಬೆಂಗಳೂರಿಗೆ ಆಗಮಿಸಿದರು. ಅವರು ಬೆಂಗಳೂರಿಗೆ ಬಂದಿಳಿದ ದಿನಾಂಕ ಖಚಿತವಾಗಿ ತಿಳಿದಿಲ್ಲ. ಅವರು ಬೆಂಗಳೂರಿನ ರೈಲು ನಿಲ್ದಾಣದ ಸಮೀಪವೇ ಇರುವ 'ತುಳಸಿ ತೋಟ' ಎಂಬ ಸಭಾಂಗಣದಲ್ಲಿ ತಂಗಿದ್ದರೆಂದೂ, ಬಳಿಕ ಡಾ. ಪಲ್ಪು ಎಂಬವರ ಮನೆಯಲ್ಲಿ ಒಂದು ದಿನ ತಂಗಿದ್ದರೆಂದೂ ತಿಳಿದು ಬಂದಿದೆ. ಇಲ್ಲಿಯೇ ಅವರು ಮೈಸೂರಿನ ದಿವಾನರಾದ ಶ್ರೀ ಶೇಷಾದ್ರಿ ಅಯ್ಯರ್ ಅವರನ್ನು ಭೇಟಿ ಮಾಡಿದರು. ದಿವಾನರ ಆಹ್ವಾನದ ಮೇರೆಗೆ ಸ್ವಾಮೀಜಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಬೆಳೆಸಿದರು.

ಸ್ವಾಮೀಜಿ ಮೈಸೂರಿಗೆ ಬಂದದ್ದು ನವೆಂಬರ್ ೧೮೯೨ರಲ್ಲಿ. ಪ್ರಾರಂಭದಲ್ಲಿ ಸ್ವಾಮೀಜಿ ಕೆಲವು ದಿನ ನಿರಂಜನ ಮಠದಲ್ಲಿ ತಂಗಿದ್ದು, ಬಳಿಕ ದಿವಾನ್ ಶೇಷಾದ್ರಿಯವರ ಅತಿಥಿಗಳಾಗಿ ಅವರ ಪಕ್ಕದ ಮನೆಯಲ್ಲಿ ವಾಸ ಮಾಡಿದರು. ಈ ಸಮಯದಲ್ಲಿ ಅವರು ಮೈಸೂರು ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಅವರನ್ನು ಸಂಧಿಸಿದ ಪ್ರಸಂಗ ಪ್ರಸಿದ್ಧವಾದದ್ದು.

### ಸ್ವಾಮಿ ಬ್ರಹ್ಮಾನಂದರು

ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರೂ ಶ್ರೀರಾಮ ಕೃಷ್ಣರ ಆಧ್ಯಾತ್ಮಿಕ ಪುತ್ರರೂ ಆದ ಸ್ವಾಮಿ ಬ್ರಹ್ಮಾನಂದರು ಜನವರಿ ೧೯೦೯ ರಲ್ಲಿ ರಾಮಕೃಷ್ಣಾನಂದರೊಂದಿಗೆ ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದರು. ೨೦ನೆ ಜನವರಿ ೧೯೦೯ರಂದು ಆಶ್ರಮದ ಕಟ್ಟಡದ ಉದ್ಘಾಟನೆಯನ್ನು ಬ್ರಹ್ಮಾನಂದರು ನಡೆಸಿಕೊಟ್ಟರು. ಮೈಸೂರಿನ ದಿವಾನರಾದ ಶ್ರೀ ವಿ. ಪಿ. ಮಾಧವ ರಾವ್ ಅವರು, ಶ್ರೀಯುತ ಪುಟ್ಟಣ್ಣ ಚೆಟ್ಟಿ ಹಾಗೂ ಇನ್ನಿತರೆ ಉನ್ನತ ಅಧಿಕಾರಿಗಳು, ಸಾರ್ವಜನಿಕರು, ಸೋದರಿ ದೇವಮಾತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಉದ್ದೇಶಿಸಿ ಸ್ವಾಮಿ ಬ್ರಹ್ಮಾನಂದರು ಹಾಗೂ ರಾಮಕೃಷ್ಣಾನಂದರು ಉಪನ್ಯಾಸ ಮಾಡಿದರು. ಸೋದರಿ ದೇವಮಾತಾ ಕೂಡ ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಈ ಕೇಂದ್ರದ ಹೆಸರು 'ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್' ಎಂದು ಇದ್ದು ತರುವಾಯ ೧೯೧೦ರಲ್ಲಿ ಸ್ವಾಮಿ ಬ್ರಹ್ಮಾನಂದರ ಆಜ್ಞೆಯ ಮೇರೆಗೆ ಇದರ ಹೆಸರನ್ನು 'ರಾಮಕೃಷ್ಣ ಆಶ್ರಮ' ಎಂದು ಪರಿವರ್ತಿಸಲಾಯಿತು.



ಇದಾದ ಕೆಲದಿನಗಳಲ್ಲಿ ಎಂದರೆ ೧೯೧೯ರ ಜನವರಿ ೨೪ರಂದು ಸ್ವಾಮಿ ವಿವೇಕಾನಂದರ ಜಯಂತಿಯನ್ನು ಸಡಗರದಿಂದ ಆಚರಿಸ ಲಾಯಿತು. ಅಲಸೂರಿನ ಸಭಾಶಾಲೆಯಲ್ಲಿ ಸಾವಿರಾರು ಜನರಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಅಲ್ಲಿ ಒಂದು ಮೆರವಣಿಗೆ ಯನ್ನು ಆಯೋಜಿಸಲಾಗಿತ್ತು. ಈ ಮೆರವಣಿಗೆಯಲ್ಲಿ ಬ್ರಹ್ಮಾ ನಂದರು, ರಾಮಕೃಷ್ಣಾನಂದರು, ಸೋದರಿ ದೇವಮಾತಾ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. RBANM ಪ್ರೌಢಶಾಲೆಯಲ್ಲಿ ಸಂಜೆ ಸಾರ್ವಜನಿಕ ಸಭಾಕಾರ್ಯಕ್ರಮವನ್ನು ಆಯೋಜಿಸಲಾ ಗಿತ್ತು. ಅದರಲ್ಲಿ ಶ್ರೀಯುತ ಎಂ. ಜಿ. ವರದಾಚಾರ್ ಅವರು ಬ್ರಹ್ಮಾ ನಂದರಿಗೆ ಸ್ವಾಗತ ಕೋರಿ ಭಾಷಣ ಮಾಡಿದರು. ರಾಮಕೃಷ್ಣಾ ನಂದರು, ದೇವಮಾತಾ, ಶ್ರೀ ಜಿ. ಜಿ. ನರಸಿಂಹಾಚಾರ್, ಶ್ರೀ ಕೃಷ್ಣ ಮಾಚಾರ್ಯ, ಶ್ರೀ ರಾಮಯ್ಯ ಸಭೆಯನ್ನು ಉದ್ದೇಶಿಸಿ ಮಾತ ನಾಡಿದರು. ಸ್ವಾಮಿ ಅಂಬಿಕಾನಂದ, ಆತ್ಮಾನಂದ ಹಾಗೂ ವಿಶುದ್ಧಾ ನಂದರು ಭಕ್ತಿಸಂಗೀತವನ್ನು ಹಾಡಿದರು.


ಬ್ರಹ್ಮಾನಂದರು ಮೈಸೂರು ಹಾಗೂ ಮೇಲುಕೋಟೆಗೆ ಭೇಟಿ ನೀಡಿದ್ದು ೧೯೦೬ರಲ್ಲಿ. ಸ್ವಾಮಿ ಗಂಭೀರಾನಂದರ History of Ramakrishna Math and Mission ಎಂಬ ಪುಸ್ತಕದ ಪ್ರಕಾರ ''ಜುಲೈ ೨೧, ೧೯೦೬ರಂದು ಬೆಂಗಳೂರು ಆಶ್ರಮದ ಆಗಿನ ಅಧ್ಯಕ್ಷ ರಾದ ಸ್ವಾಮಿ ನಿರ್ಮಲಾನಂದರ ವಿನಂತಿಯ ಮೇರೆಗೆ ಬ್ರಹ್ಮಾ ನಂದರು ಕಲ್ಕತ್ತದಿಂದ ಮದ್ರಾಸ್ ಮುಖಾಂತರ ಬೆಂಗಳೂರಿಗೆ ಹೊರಟರು. ಆ ಸಂದರ್ಭದಲ್ಲಿ ಮೈಸೂರು ಹಾಗೂ ಮೇಲು ಕೋಟೆಗೆ ಭೇಟಿ ನೀಡಿದರು.'' ೧೨ನೆ ಆಗಸ್ಟ್ ೧೯೦೬ರ ಬೆಳಿಗ್ಗೆ ಬ್ರಹ್ಮಾನಂದರು ಎರಡನೆಯ ಬಾರಿಗೆ ಬೆಂಗಳೂರಿಗೆ ಆಗಮಿಸುತ್ತಾರೆ. ಬೆಂಗಳೂರಿನಲ್ಲಿ ಸುಮಾರು ೩ ತಿಂಗಳುಗಳ ಕಾಲ ತಂಗಿದ್ದು, ತದ ನಂತರ ೧೯೦೬ರ ನವೆಂಬರ್ ೨೬ರಂದು ಕೇರಳದ ಕಡೆಗೆ ಪ್ರಯಾಣ ಬೆಳೆಸುತ್ತಾರೆ.

೧೯೨೧ರ ಜೂನ್ ೧೪ರಂದು ಬ್ರಹ್ಮಾನಂದರು ಮೂರನೆಯ ಬಾರಿಗೆ ಬೆಂಗಳೂರಿಗೆ ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಸ್ವಾಮಿ ಶಿವಾನಂದರು ಅವರೊಂದಿಗೆ ಬೆಂಗಳೂರಿಗೆ ಬರುತ್ತಾರೆ. ಈ ಸಂದ ರ್ಭದಲ್ಲಿ ಬ್ರಹ್ಮಾನಂದರು ಹಾಗೂ ಶಿವಾನಂದರು ಫ್ರೇಸರ್ ಟೌನ್ ಏರಿಯಾದಲ್ಲಿ ಡಾ. ವೆಂಕಟರಂಗಮ್ ಎಂಬುವವರು ಕಟ್ಟಿದ ವೀರೇಶ್ವರ ವಿಲಾಸಕ್ಕೆ ಭೇಟಿ ನೀಡುತ್ತಾರೆ. ಬೆಂಗಳೂರು ಆಶ್ರಮ ದಲ್ಲಿದ್ದ ಈ ಸಂದರ್ಭದಲ್ಲಿಯೇ ಬ್ರಹ್ಮಾನಂದರು ಪ್ರತಿ ಏಕಾದಶಿ ಯಂದು ಜರುಗುವ ಶ್ರೀರಾಮನಾಮ ಸಂಕೀರ್ತನೆಯನ್ನು ಕೇಳಿ ದುದು. ತದನಂತರ ಇದನ್ನು ಅವರು ರಾಮಕೃಷ್ಣ ಮಹಾಸಂಘದ ಪ್ರತಿ ಶಾಖೆಗೂ ಕಡ್ಡಾಯಗೊಳಿಸುತ್ತಾರೆ. ಇದೇ ಸಂದರ್ಭದಲ್ಲಿ ಆಗಸ್ಟ್ ಮೊದಲ ವಾರ ಬೆಂಗಳೂರಿನಲ್ಲಿ ಬೃಹತ್ ಪ್ರಮಾಣದಲ್ಲಿ ಹೂವಿನ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಇದು ದಕ್ಷಿಣ ಭಾರತದಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದ್ದು. ಸರ್ಕಾರಿ ಅಧಿ ಕಾರಿಗಳು ಬ್ರಹ್ಮಾನಂದರು ಹಾಗೂ ಶಿವಾನಂದರನ್ನು ಪುಷ್ಪ ವೀಕ್ಷ ಣೆಗೆ ಆಗಮಿಸಬೇಕೆಂದು ವಿನಂತಿಸಿದ್ದರು. ಯತಿದ್ವಯರು ಇದರ ವೀಕ್ಷಣೆಗೆ ತೆರಳಿದ್ದರು. ಪುಷ್ಪ-ವೃಕ್ಷಗಳ ಕುರಿತಾಗಿ ಅತ್ಯಂತ ಆಸಕ್ತಿ ಯುಳ್ಳ ಬ್ರಹ್ಮಾನಂದರು ಈ ಪ್ರದರ್ಶನವನ್ನು ಸಹಜವಾಗಿಯೇ ಬಹಳ ಆಸ್ವಾದಿಸಿದರು. ಸುಮಾರು ೩ ತಿಂಗಳುಗಳ ಕಾಲ ಬೆಂಗ ಳೂರಿನಲ್ಲಿ ಇದ್ದು, ತರುವಾಯ ೧೯೨೧ರ ಅಕ್ಟೋಬರ್ ೪ರಂದು ಬ್ರಹ್ಮಾನಂದರು ಶಿವಾನಂದರೊಂದಿಗೆ ಮದ್ರಾಸಿನ ಕಡೆಗೆ ಪ್ರಯಾಣ ಮಾಡಿದರು.

### ಸ್ವಾಮಿ ಶಿವಾನಂದರು

ಮಹಾಪುರುಷ ಮಹಾರಾಜರೆಂದೇ ಪ್ರಖ್ಯಾತರಾದ ಸ್ವಾಮಿ ಶಿವಾನಂದರು ಬೆಂಗಳೂರಿಗೆ ಮೊದಲ ಬಾರಿಗೆ ಭೇಟಿ ನೀಡಿದ್ದು ೧೯೨೧ರಲ್ಲಿ. ಆಗ ಬೆಂಗಳೂರು ಆಶ್ರಮದಲ್ಲಿದ್ದ ಸ್ವಾಮಿ ಶಾಂಭವಾ ನಂದರು ಹೀಗೆ ಬರೆಯುತ್ತಾರೆ: ''ಮಹಾಪುರುಷ ಮಹಾರಾಜರು ಹೆಚ್ಚಿನ ಸಮಯವನ್ನು ಧ್ಯಾನ-ಜಪಗಳಲ್ಲಿ ಕಳೆಯುತ್ತಿದ್ದರೂ, ಅವರು ಪ್ರತಿಯೊಬ್ಬರೊಂದಿಗೆ ಆತ್ಮೀಯವಾಗಿ ಬೆರೆತು ಶ್ರೀರಾಮ ಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ಕುರಿತಾಗಿ ಮಾತನಾಡು ತ್ತಿದ್ದರು. ನಿಯಮಿತತೆ ಹಾಗೂ ಶಿಸ್ತು ಇದು ಅವರ ಜೀವನದ ಶೈಲಿಯೇ ಆಗಿತ್ತು. ಪ್ರತಿದಿನ ಬೆಳಿಗ್ಗೆ ೩ಗಂಟೆಯಿಂದ ಸೂರ್ಯೋ ದಯದವರೆಗೂ ಅವರು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಒಮ್ಮೆ ನನ್ನ ನಿರ್ಲಕ್ಷ್ಯದಿಂದಾಗಿ ಮಹಾಪುರುಷ ಮಹಾರಾಜರ ಕೆಲವಾರು ಬಟ್ಟೆಗಳು ಕಳ್ಳತನಗೊಂಡವು. ಆದರೆ ಮಹಾಪುರುಷ ಮಹಾ ರಾಜರು ಆ ಕಾರಣಕ್ಕಾಗಿ ನನ್ನನ್ನು ನಿಂದಿಸಲಿಲ್ಲ. ಬದಲಾಗಿ ಅವರು ಅದನ್ನು ಅತ್ಯಂತ ಸಹಜವೆಂಬಂತೆ ಪರಿಗಣಿಸಿ, ನನ್ನ ತಪ್ಪನ್ನು ಕ್ಷಮಿಸಿ ದ್ದರು. ಈ ಘಟನೆ ಅವರ ಕುರಿತಾಗಿ ನನ್ನ ಗೌರವ ಹಾಗೂ ಭಕ್ತಿ ಯನ್ನು ಮತ್ತಷ್ಟು ಹೆಚ್ಚಿಸಿತು.''

ಸ್ವಾಮಿ ವಿವಿದಿಶಾನಂದರು ತಮ್ಮ The Saga of a Great Soul ಎಂಬ ಪುಸ್ತಕದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ: ''ಕೆಲ ವಾರಗಳ ಕಾಲ ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ತಂಗಿದ ತರುವಾಯ



ಮಹಾಪುರುಷ ಮಹಾರಾಜರು ಮೈಸೂರಿಗೆ ಆಗಮಿಸಿದರು. ಅಲ್ಲಿ ನಾಡದೇವತೆಯಾದ ಶ್ರೀಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ ದೇವಿಯ ದರ್ಶನ ಪಡೆದರು. ಮಹಾಪುರುಷ ಮಹಾರಾಜ್ ಹೇಳಿದರು, 'ಆಹಾ! ಇಲ್ಲಿ ದೇವಿ ಜಾಗೃತಳಾಗಿ ನೆಲೆಸಿದ್ದಾಳೆ. ಆಕೆಯ ಕೃಪೆಯಿಂದ ನನಗಿಂದು ಅದ್ಭುತವಾದ ದರ್ಶನವಾಯಿತು' ಎಂದು.

೧೧ನೇ ಸೆಪ್ಟೆಂಬರ್ ೧೯೨೧ರ ತಮ್ಮ ಒಂದು ಪತ್ರದಲ್ಲಿ ಶಿವಾನಂದರು ಬರೆಯುತ್ತಾರೆ: ''ನಾನು ಕೆಲದಿನಗಳ ಕಾಲ ಮೈಸೂರಿಗೆ ಹೋಗಿದ್ದೆ. ತಾಯಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ ಆಕೆಯ ದರ್ಶನ ಪಡೆದೆ, ಅಲ್ಲಿ ದುರ್ಗಾಸಪ್ತಶತಿಯ ಪಾರಾಯಣ ಮಾಡಿದೆ. ತದನಂತರ ಮೇಲುಕೋಟೆಯಲ್ಲಿನ ನಾರಾಯಣ ಸ್ವಾಮಿಯ ದರ್ಶನಕ್ಕೆ ಹೋದೆ. ಶ್ರೀರಾಮಾನುಜರು ತಮ್ಮ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೋಧಿಸಲು ಆರಂಭಿಸಿದ್ದು ಇಲ್ಲಿಂದಲೇ. ಇದು ವೈಷ್ಣವರಿಗೆ ಅತ್ಯಂತ ಪವಿತ್ರ ಕ್ಷೇತ್ರ'' ಎಂದು. ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗಿದ ಶಿವಾನಂದರು ಬ್ರಹ್ಮಾನಂದರೊಂದಿಗೆ ೧೯೨೧ರ ಅಕ್ಟೋಬರ್ ೪ರಂದು ಮದ್ರಾಸಿನ ಕಡೆಗೆ ಪ್ರಯಾಣ ಮಾಡಿದರು.

೧೯೨೪ರ ಜುಲೈ ತಿಂಗಳಿನಲ್ಲಿ ಆಗಿನ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ಶಿವಾನಂದರು ಪುನಃ ಬೆಂಗಳೂರಿಗೆ ಭೇಟಿ ನೀಡಿದರು. ಇದು ಬೆಂಗಳೂರಿಗೆ ಶಿವಾನಂದರ ಎರಡನೆಯ ಭೇಟಿ. ಆಗಿನ ಕುರಿತಾಗಿ ಸ್ವಾಮಿ ವಿಶುದ್ಧಾನಂದರು ಬರೆಯುತ್ತಾರೆ: ''ಶಿವಾನಂದರಿಗೆ ಬಡವರ ಕುರಿತಾಗಿ ಅಪಾರ ಅನುಕಂಪೆ ಇತ್ತು. ಆಶ್ರಮದ ಅನತಿ ದೂರದಲ್ಲಿ ಕೆಲ ಹರಿಜನರು ವಾಸವಾಗಿದ್ದರು. ಆ ಅಸ್ಪೃಶ್ಯ ಮಕ್ಕಳಿಗೆ ಶಿವಾನಂದರು ಕೆಲವಾರು ರೂಪಾಯಿಗಳನ್ನು, ಚಾಕೊಲೇಟ್ ಹಾಗೂ ಬಿಸ್ಕತ್ತುಗಳನ್ನು ನೀಡುತ್ತಿದ್ದರು. ಅವರುಗಳೆಲ್ಲ ಕನ್ನಡದಲ್ಲಿ ಮಾತನಾಡುತ್ತಿದ್ದರು. ಸ್ವಾಮೀಜಿಗೆ ಅವರ ಭಾಷೆ ತಿಳಿಯುತ್ತಿರಲಿಲ್ಲ. ಆದರೆ ಅವರ ದುಃಸ್ಥಿತಿಗಾಗಿ ಮರುಗಿ, ಹೊಸ ಬಟ್ಟೆಗಳನ್ನು ಖರೀದಿಸಿ ಆ ಮಕ್ಕಳಿಗೆ ವಿತರಿಸುತ್ತಿದ್ದರು.''

ಆ ಅಸ್ಪೃಶ್ಯರ ಕೇರಿಯಲ್ಲಿ ಒಂದು ಮಂದಿರವಿತ್ತು. ಆ ಊರೋ ಅತ್ಯಂತ ಕೊಳಕಾಗಿತ್ತು. ಆದರೆ ಶಿವಾನಂದರು ಆ ದೇವಸ್ಥಾನಕ್ಕೆ ಭೇಟಿ ನೀಡಿದರು. ದೇವಸ್ಥಾನಕ್ಕೆ ೧೦ರೂಪಾಯಿ ಕಾಣಿಕೆ ಸಲ್ಲಿಸಿದರು. ಹೊರಗೆ ಬಂದು ಅಕ್ಕಿ ಗಂಜಿಯನ್ನು ದೇವರಿಗೆ ನೈವೇದ್ಯ ಸಲ್ಲಿಸಲು ಹೇಳಿ, ಪ್ರಸಾದ ಸ್ವೀಕರಿಸಲು ತಿಳಿಸಿದರು. ಗ್ರಾಮಸ್ಥರಿಗೆ ಶುಚಿಯಾಗಿರಬೇಕೆಂದು ತಿಳಿಹೇಳಿದರು. ಯಾವೊಬ್ಬ ಉಚ್ಚಕುಲದ ವ್ಯಕ್ತಿಯೂ ಈವರೆಗೂ ಆ ದೇವಸ್ಥಾನವನ್ನು ಪ್ರವೇಶಿಸಿರಲಿಲ್ಲ. ಆ ಜನರೆಲ್ಲ ಆನಂದತುಂದಿಲರಾಗಿ ಶಿವಾನಂದರಿಗೆ ಪ್ರಣಾಮ ಸಲ್ಲಿಸಿದರು. ಶಿವಾನಂದರು ಅವರನ್ನು ಮನಸಾರೆ ಆಶೀರ್ವದಿಸಿದರು. ಆಶ್ರಮಕ್ಕೆ ಹಿಂದಿರುಗಿದ ಬಳಿಕ ಶಿವಾನಂದರು ನುಡಿದರು, ''ಎಲ್ಲ ಕಡೆಗೂ ಒಬ್ಬನೇ ದೇವರು ಇರುವುದು. ಅಸ್ಪೃಶ್ಯರ ದೇವರು ಬೇರೆಯಲ್ಲ'' ಎಂದು. ಕೆಲವು ದಿನಗಳಲ್ಲಿ ಆ ಹಳ್ಳಿಯಲ್ಲಿ ಅಭೂತಪೂರ್ವ ಬದಲಾವಣೆ ಪ್ರಾರಂಭವಾಯಿತು. ಜನರೆಲ್ಲ ಸೇರಿ ಗ್ರಾಮವನ್ನು ಶುಚಿಗೊಳಿಸಿ ಇಡಲಾರಂಭಿಸಿದರು.

ಓರ್ವ ಶ್ರೀಮಂತ ಭಕ್ತ ಶಿವಾನಂದರಿಂದ ಮಂತ್ರದೀಕ್ಷೆ ಪಡೆದ. ಗುರುಕಾಣಿಕೆಯಾಗಿ ೧೦೦೦೦ ರೂಪಾಯಿಗಳನ್ನು (ಆಗಿನ ಕಾಲದಲ್ಲಿ ಇದು ಬಹುದೊಡ್ಡ ಮೊತ್ತ) ಹಾಗೂ ಮದ್ರಾಸಿ ವಸ್ತ್ರಗಳನ್ನು ಸಲ್ಲಿಸಿದ. ಆದರೆ ಶಿವಾನಂದರು ಅದನ್ನು ಸ್ವೀಕರಿಸಲಿಲ್ಲ. ಬದಲಾಗಿ, ''ನಾನಲ್ಲ ನಿನ್ನ ಗುರು. ನಿನ್ನ ಗುರು ಶ್ರೀರಾಮಕೃಷ್ಣರು. ಇದು ಅವರಿಗೆ ಸೇರಿದ್ದು'' ಎಂದು ಹೇಳಿ, ಆ ಹಣವನ್ನು ಹಾಗೂ ವಸ್ತ್ರಗಳನ್ನು ಇತರ ಆಶ್ರಮಗಳಿಗೆ ಹಂಚಿಬಿಟ್ಟರು.

೧೯೨೫ರ ಜನವರಿಯಲ್ಲಿ ಶಿವಾನಂದರು ಬೆಂಗಳೂರಿನಿಂದ ಹಿಂದಿರುಗಿದರು.

## ಸ್ವಾಮಿ ರಾಮಕೃಷ್ಣಾನಂದರು

ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾದ ಬೆಂಗಳೂರಿನ ಜನರು ಒಂದು ವೇದಾಂತ ಸೊಸೈಟಿಯನ್ನು ಆರಂಭಿಸಿದ್ದರು. ಈ ವೇದಾಂತ ಸೊಸೈಟಿಯ ಆಹ್ವಾನದ ಮೇರೆಗೆ ರಾಮಕೃಷ್ಣಾನಂದರು ೧೯೦೩ರ ಜುಲೈ ೧೯ರಿಂದ ಆಗಸ್ಟ್‌ವರೆಗೆ ಬೆಂಗಳೂರಿಗೆ ಮೊದಲ ಬಾರಿಗೆ ಆಗಮಿಸಿ, ಅಲ್ಲಿ ತಂಗಿದ್ದರು.

ಬೆಂಗಳೂರಿನಲ್ಲಿ ಅವರಿಗೆ ಭರ್ಜರಿಯಾದ ಸ್ವಾಗತ ದೊರೆಯಿತು. ೫೩ ಭಜನಾ ತಂಡಗಳು ಸೇರಿದಂತೆ ಸುಮಾರು ೪೦೦೦ ಜನರು ರೈಲು ನಿಲ್ದಾಣದಲ್ಲಿ ರಾಮಕೃಷ್ಣಾನಂದರನ್ನು ಸ್ವಾಗತಿಸಿದರು. ೩ ಮೈಲಿಯ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ರಾಮಕೃಷ್ಣಾನಂದರು ಬೆಂಗಳೂರಿನಲ್ಲಿ ಸುಮಾರು ೧೨ ಸಾರ್ವಜನಿಕ ಉಪನ್ಯಾಸಗಳನ್ನು ನೀಡಿದರು. ಇವುಗಳಲ್ಲಿ ತುಳಸಿ ತೋಟದ ಬಳಿಯಲ್ಲಿನ ಪೂರ್ಣಯ್ಯ ಸಭಾಂಗಣದಲ್ಲಿ ನೀಡಿದ ೨ ಉಪನ್ಯಾಸಗಳು ಒಳಗೊಂಡಿವೆ. ಈ ಎಲ್ಲ ದಿನಗಳಲ್ಲಿ ರಾಮಕೃಷ್ಣಾನಂದರು ಅತ್ಯಂತ ಸ್ಫೂರ್ತಿಯುತ ಉಪನ್ಯಾಸ ನೀಡಿದರು. ತನ್ಮೂಲಕ ಬೆಂಗಳೂರಿನಲ್ಲಿ ಆಧ್ಯಾತ್ಮಿಕತೆಯ ಒಂದು ಅಲೆಯನ್ನೇ ಎಬ್ಬಿಸಿದರು.



ಆ ಸಂದರ್ಭದಲ್ಲಿ ಶ್ರೀಯುತ ನಾರಾಯಣ ಐಯ್ಯಂಗಾರ್ ಅವರು ರಾಮಕೃಷ್ಣಾನಂದರನ್ನು ದಸರಾ ಉತ್ಸವ ವೀಕ್ಷಿಸಲು ಮೈಸೂರಿಗೆ ಆಮಂತ್ರಿಸಿದರು. ೧೯೦೪ರ ಜುಲೈ ೨೭ರಂದು ಅವರು ಮೈಸೂರಿಗೆ ಭೇಟಿ ನೀಡಿದರು. ಮೈಸೂರಿನ ರಂಗಾಚಾರ್ಲು ಟೌನ್ ಹಾಲ್‌ನಲ್ಲಿ ಇವರು ಸಾರ್ವಜನಿಕರಿಗೆ ಹಲವಾರು ಉಪನ್ಯಾಸಗಳನ್ನು ನೀಡಿದರು. ಮೈಸೂರಿನ ಹಲವಾರು ಸಂಸ್ಕೃತ ವಿದ್ವಾಂಸರೊಂದಿಗೆ ಇವರು ಸಂಸ್ಕೃತದಲ್ಲಿ ಶಾಸ್ತ್ರ ಚರ್ಚೆ ಮಾಡಿದರು. ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿ ಅಲ್ಲಿ ಸಾರ್ವಜನಿಕರಿಗೆ ವೇದಾಂತ ಕುರಿತಾಗಿ ಉಪನ್ಯಾಸ ನೀಡಿದರು.

೧೯೦೪ರ ಆಗಸ್ಟ್ ೯ರಂದು ರಾಮಕೃಷ್ಣಾನಂದರಿಗೆ ಬೀಳ್ಕೊಡುವ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಮೈಸೂರಿನ ದಿವಾನರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಇದಾದ ತರುವಾಯ ಬೆಂಗಳೂರಿನ ಜನರ ವಿನಂತಿಯ ಮೇರೆಗೆ ರಾಮಕೃಷ್ಣಾನಂದರು ಯೋಗೇಶ್ವರಾನಂದರನ್ನು ಹಾಗೂ ಕೆಲ ಕಾಲದ ಬಳಿಕ ಆತ್ಮಾನಂದ (ಸ್ವಾಮಿ ವಿವೇಕಾನಂದರ ಶಿಷ್ಯರು) ರನ್ನು ಬೆಂಗಳೂರಿನಲ್ಲಿ ರಾಮಕೃಷ್ಣ ಮಹಾಸಂಘದ ಶಾಖೆಯನ್ನು ಆರಂಭಿಸಲು ಕಳುಹಿಸಿಕೊಟ್ಟರು.

೧೯೦೬ರ ಜುಲೈ ೨೯ರಂದು ರಾಮಕೃಷ್ಣಾನಂದರು ಅಭೇದಾನಂದರೊಂದಿಗೆ ಬೆಂಗಳೂರಿಗೆ ಎರಡನೇ ಬಾರಿಗೆ ಆಗಮಿಸಿದರು. ಈರ್ವರು ಯತಿಗಳು ತದನಂತರ ಮೈಸೂರಿಗೆ ಭೇಟಿ ನೀಡಿದರು. ಯತಿದ್ವಯರು ಆಗ ಮೈಸೂರು ಅರಮನೆಗೆ ತೆರಳಿ ಸಂಸ್ಥಾನದ ಮಹಾರಾಜರನ್ನೂ ಭೇಟಿ ಮಾಡಿದರು ಹಾಗೂ ಸಭೆಯ ಸಂಸ್ಕೃತ ಪಂಡಿತರೊಂದಿಗೆ ಶಾಸ್ತ್ರಚರ್ಚೆ ನಡೆಸಿದರು.

೧೯೦೮ರ ಮೇ ತಿಂಗಳಲ್ಲಿ ರಾಮಕೃಷ್ಣಾನಂದರು ಸೋದರಿ ದೇವಮಾತಾ ಅವರೊಂದಿಗೆ ಮೂರನೆಯ ಬಾರಿಗೆ ಬೆಂಗಳೂರಿಗೆ ಆಗಮಿಸಿದರು. ಅಲ್ಲಿ ಅವರು ಕೆಲವಾರು ತಿಂಗಳುಗಳ ಕಾಲ ನೆಲೆಸಿದ್ದರು. ಬೆಂಗಳೂರಿನ ಹಲವೆಡೆ ಉಪನ್ಯಾಸಗಳನ್ನು ನೀಡಿದರು. ಇದಲ್ಲದೆ ನೂತನವಾಗಿ ನಿರ್ಮಾಣಗೊಳ್ಳಲಿರುವ ಆಶ್ರಮದ ಕಟ್ಟಡಕ್ಕಾಗಿ ಧನವನ್ನು ಸಂಗ್ರಹಿಸಲು ಪ್ರಯತ್ನಿಸಿದರು.

ಸೋದರಿ ದೇವಮಾತಾ ಇದರ ಕುರಿತಾಗಿ ಬರೆಯುತ್ತಾರೆ: ''ಸ್ವಾಮಿ ರಾಮಕೃಷ್ಣಾನಂದರು ದಕ್ಷಿಣಕ್ಕೆ ಆಗಮಿಸಿದ ತಕ್ಷಣ ನಾವು ಧನಸಂಗ್ರಹ ಮಾಡಲು ಆರಂಭಿಸಿದೆವು. ಆದರೆ ಧನಸಂಗ್ರಹ ಕಾರ್ಯ ಅತ್ಯಂತ ನಿಧಾನ ಗತಿಯಲ್ಲಿ ಸಾಗುತ್ತಿತ್ತು. ಒಂದು ದಿನ ನಾವು ಓರ್ವ ಅಧಿಕಾರಿಗಳನ್ನು ಭೇಟಿಯಾಗಲು ಹೋದೆವು. ಸುಮಾರು ೨ ಗಂಟೆಗಳ ಕಾಲ ಅವರ ಬರವಿಗಾಗಿ ಕಾದು ಕುಳಿತ ತರುವಾಯ ನಮಗವರ ಭೇಟಿಯಾಯಿತು. ನಾನವರಿಗೆ ನೂತನ ಕಟ್ಟಡ ನಿರ್ಮಾಣದ ಕುರಿತಾಗಿ ತಿಳಿಸಲು ಪ್ರಾರಂಭಿಸಿದೆ. ಆಗ ಆ ಅಧಿಕಾರಿಗಳು ನನ್ನ ಮಾತನ್ನು ಅರ್ಧಕ್ಕೆ ಕತ್ತರಿಸಿ, ಅಸಹನೆಯಿಂದ, 'ಈ ರಾಮಕೃಷ್ಣ ಎಂಬವರಿಗೆ ಯಾಕಿಷ್ಟು ಪ್ರಾಶಸ್ತ್ಯ ಕೊಡುತ್ತಿರುವಿರೋ ಗೊತ್ತಿಲ್ಲ' ಎಂದರು. ನಾನು ಮರುಮಾತನಾಡಲು ತೋಚದೆ ಸುಮ್ಮನಾದೆ. ಆಗ ರಾಮಕೃಷ್ಣಾನಂದರು ಆ ಅಧಿಕಾರಿಯ ಕಡೆಗೆ ತಿರುಗಿ, ಮುಗುಳ್ನಕ್ಕು, 'ನಾನು ನಿಮಗೆ ತಿಳಿಸುತ್ತೇನೆ, ಏಕೆಂದರೆ ನಾನವರ ವೈಯಕ್ತಿಕ ಸೇವಕ' ಎಂದು ನುಡಿದು, ಶ್ರೀರಾಮಕೃಷ್ಣರ ಜೀವನ-ಸಂದೇಶಗಳ ಕುರಿತಾಗಿ ಮಾತನಾಡಲು ಪ್ರಾರಂಭಿಸಿದರು. ಇದಾದ ಬಳಿಕ ಆ ಅಧಿಕಾರಿ ನಮಗೆ ಬಹುದೊಡ್ಡ ಮೊತ್ತದ ಹಣವನ್ನು ಕಟ್ಟಡ ನಿರ್ಮಾಣಕ್ಕಾಗಿ ನೀಡಿದರು.''

ರಾಮಕೃಷ್ಣಾನಂದರು ೧೯೦೯ರ ಜನವರಿಯಲ್ಲಿ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರೊಂದಿಗೆ ಬೆಂಗಳೂರಿಗೆ ನಾಲ್ಕನೆಯ ಬಾರಿಗೆ ಆಗಮಿಸಿದರು. ೧೯೦೯ರ ಜನವರಿ ೨೦ರಂದು ಆಶ್ರಮದ ಕಟ್ಟಡದ ಉದ್ಘಾಟನೆ ಜರುಗಿತು.

೧೯೧೦ರ ಆಗಸ್ಟ್‌ನಲ್ಲಿ ರಾಮಕೃಷ್ಣಾನಂದರು ಬೆಂಗಳೂರಿಗೆ ಐದನೆಯ ಬಾರಿ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಫ್ರೇಸರ್ ಟೌನ್ ಏರಿಯಾದಲ್ಲಿ ಡಾ. ವೆಂಕಟರಂಗಮ್ ಎಂಬವರು ಕಟ್ಟಿದ ಕಟ್ಟಡವನ್ನು ಉದ್ಘಾಟಿಸಿದರು. ಅದಕ್ಕೆ ವಿವೇಕಾನಂದರ ಸ್ಮರಣಾರ್ಥವಾಗಿ 'ವೀರೇಶ್ವರ ವಿಲಾಸ' ಎಂದು ನಾಮಕರಣ ಮಾಡಲಾಯಿತು. ಇದು ಕಾಲಾಂತರದಲ್ಲಿ 'ಶ್ರೀ ಶಾರದಾ ಮಾತೃ ಮಂದಿರ' ಎಂದು ಹೆಸರನ್ನು ಪಡೆದು ಸ್ತ್ರೀಸಾಧಕಿಯರ ಆಶ್ರಮವಾಗಿ ಪರಿವರ್ತಿತವಾಯಿತು.

ಶ್ರೀಮಾತೆ ಶಾರದಾದೇವಿಯವರೊಂದಿಗೆ ರಾಮಕೃಷ್ಣಾನಂದರು ೧೯೧೧ರ ಮಾರ್ಚ್ ೨೪, ಶುಕ್ರವಾರದಂದು ಬೆಳಿಗ್ಗೆ ಬೆಂಗಳೂರಿಗೆ ಆಗಮಿಸಿದರು. ಇದು ಬೆಂಗಳೂರಿಗೆ ರಾಮಕೃಷ್ಣಾನಂದರ ಆರನೆಯ ಭೇಟಿ. ಇದೇ ಸಂದರ್ಭದಲ್ಲಿ ಒಮ್ಮೆ ಶ್ರೀಮಾತೆಯವರು ಬೆಂಗಳೂರು ಆಶ್ರಮದ ಆವರಣದಲ್ಲಿನ ಪುಟ್ಟ ಬಂಡೆಯೊಂದರ ಮೇಲೆ ಸೂರ್ಯಾಸ್ತ ನೋಡಲು ಹೋಗಿ ಕುಳಿತುಕೊಂಡಿದ್ದರು. ಈ

ಸಂಗತಿ ತಿಳಿದ ರಾಮಕೃಷ್ಣಾನಂದರು, ''ಓಹೋ, ಇಂದು ಮಾತೆಯವರು ಪರ್ವತವಾಸಿನಿಯಾಗಿದ್ದಾರೆ'' ಎಂದು ಉದ್ಗರಿಸುತ್ತ ಅಲ್ಲಿಗೆ ತೆರಳಿ ಶ್ರೀಮಾತೆಯವರನ್ನು ದುರ್ಗಾಸಪ್ತಶತಿಯ ಪ್ರಸಿದ್ಧ ಮೂರು ಮಂತ್ರಗಳಿಂದ ಸ್ತುತಿಸಿ, ತಾಯಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿದರು.

ಶ್ರೀಮಾತೆಯವರು ಕಲ್ಕತ್ತಕ್ಕೆ ಮರಳಿದ ತರುವಾಯ, ರಾಮಕೃಷ್ಣಾನಂದರು ಪುನಃ ಮತ್ತೊಮ್ಮೆ ಬೆಂಗಳೂರಿಗೆ ಏಳನೆಯ ಬಾರಿ ಆಗಮಿಸಿದರು. ಈ ಸಂಧರ್ಭದಲ್ಲಿ ಅವರ ಆರೋಗ್ಯ ಶಿಥಿಲಗೊಂಡಿದ್ದು, ಅದು ಟ್ಯೂಬರ್‌ಕಿಲೋಸಿಸ್ ಎಂದು ಬೆಂಗಳೂರಿನಲ್ಲಿ ಆರೋಗ್ಯ ತಪಾಸಣೆ ಮಾಡಿದಾಗ ತಿಳಿದುಬಂತು. ಶ್ರೀರಾಮಕೃಷ್ಣರ ಸಹಧರ್ಮಿಣಿಯಾದ ಶ್ರೀಮಾತೆ ಶಾರದಾದೇವಿಯವರನ್ನು ಹಾಗೂ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪುತ್ರರಾದ ಸ್ವಾಮಿ ಬ್ರಹ್ಮಾ ನಂದರನ್ನು ದಕ್ಷಿಣ ಭಾರತಕ್ಕೆ ಕರೆತರಬೇಕು, ತನ್ಮೂಲಕ ಈ ಭಾಗದ ಜನರು ಆಧ್ಯಾತ್ಮಿಕ ಶಾಂತಿಯನ್ನು ಅನುಭವಿಸುವಂತಾಗಬೇಕು ಎಂಬುದು ರಾಮಕೃಷ್ಣಾನಂದರ ಮನದಾಳದ ತುಡಿತವಾಗಿತ್ತು. ಇದನ್ನು ಅವರು ತಮ್ಮ ಆತ್ಮೀಯ ಭಕ್ತರೆದುರಿಗೆ ಬೆಂಗಳೂರಿನಲ್ಲಿ ಇದ್ದಾಗ ಹೊರಗೆಡಹಿದರು. ಮತ್ತೆ, ಈಗ ಈ ಎರಡೂ ಕಾರ್ಯಗಳು ಪೂರ್ಣಗೊಂಡಿರುವುದರಿಂದ ತಾವಿನ್ನು ಸಂತೃಪ್ತಿಯಿಂದ ದೇಹತ್ಯಾಗ ಮಾಡಬಹುದು ಎಂಬ ಸಂಗತಿಯನ್ನು ಪ್ರಕಟಪಡಿಸಿದರು. ಬೆಂಗಳೂರಿನಿಂದ ಕಲ್ಕತ್ತಕ್ಕೆ ತೆರಳಿದ ರಾಮಕೃಷ್ಣಾನಂದರು ೧೯೧೧ರ ಆಗಸ್ಟ್ ೨೧ರಂದು ಮಹಾಸಮಾಧಿಯನ್ನು ಹೊಂದಿದರು.

### ಸ್ವಾಮಿ ಅಭೇದಾನಂದರು

ಅಭೇದಾನಂದರು ಅಮೆರಿಕಾದಿಂದ ಹಿಂದಿರುಗಿದ ಬಳಿಕ, ೧೯೦೬ರ ಜುಲೈ ೨೯ರಂದು ರಾಮಕೃಷ್ಣಾನಂದರೊಡನೆ ಬೆಂಗಳೂರಿಗೆ ಪ್ರಥಮ ಬಾರಿಗೆ ಆಗಮಿಸಿದರು. ಅವರಿಗೆ ಭವ್ಯ ಸ್ವಾಗತವನ್ನು ನೀಡಲಾಯಿತು. ರಾಜ್ಯ ಅತಿಥಿಗಳಾಗಿ ಪರಿಗಣಿಸಿ ಅವರ ವಾಸ್ತವ್ಯಕ್ಕೆ ಉತ್ತಮ ವ್ಯವಸ್ಥೆಯನ್ನು ಮಾಡಲಾಗಿತ್ತು. ೧೯೦೬ರ ಜುಲೈ ೩೦ರಂದು ದೊಡ್ಡಣ್ಣ ಹಾಲ್‌ನಲ್ಲಿ ಅವರಿಗಾಗಿ ಸ್ವಾಗತ ಸಮಾರಂಭವನ್ನು ಆಯೋಜಿಸಲಾಗಿತ್ತು. ಮೈಸೂರಿನ ದಿವಾನರಾದ ಶ್ರೀ ಮಾಧವ ರಾವ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ೧೯೦೬ರ ಆಗಸ್ಟ್ ೫ರಂದು ಬೆಂಗಳೂರಿನ ಹಿಂದೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅಭೇದಾನಂದರು ಉಪನ್ಯಾಸ ಮಾಡಿದರು. ಸುಮಾರು ೩೦೦೦ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದರು.

ಅಭೇದಾನಂದರು ರಾಮಕೃಷ್ಣಾನಂದರೊಂದಿಗೆ ೧೯೦೬ರ ಆಗಸ್ಟ್ ೭ರಂದು ಬೆಂಗಳೂರಿನಿಂದ ಶ್ರವಣಬೆಳಗೊಳದ ಮಾರ್ಗವಾಗಿ ಪ್ರಯಾಣ ಮಾಡಿ ಮೈಸೂರಿಗೆ ಬಂದು ತಲುಪಿದರು. ಮೈಸೂರಿನ ರೈಲು ನಿಲ್ದಾಣದಲ್ಲಿ ಯತಿದ್ವಯರ ಸ್ವಾಗತಕ್ಕಾಗಿ ಅನೇಕ ಜನ ಕಿಕ್ಕಿರಿದಿದ್ದರು. ಅಧಿಕಾರಿಗಳು, ಅಧಿಕಾರೇತರ ಜನರು, ವಿದ್ಯಾರ್ಥಿಗಳು, ಮುನ್ಸಿಪಲ್ ಕಮಿಷನರ್, ಅಧ್ಯಕ್ಷರು, ಉಪಾಧ್ಯಕ್ಷರು ಆಗಮಿಸಿದ್ದರು. ಉಪನ್ಯಾಯಾಧೀಶರಾದ ಶ್ರೀಯುತ ಮೀರ್ ಹೂಮ್ಸಾ ಹುಸೇನ್‌ರವರ ನೇತೃತ್ವದಲ್ಲಿ ಮುಸ್ಲಿಂ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು. ರೈಲು ನಿಲ್ದಾಣಕ್ಕೆ ತಲುಪುತ್ತಿದ್ದಂತೆ ಶ್ರೀಯುತ



ಕಾಂತರಾಜ್ ಅರಸ್ ಅವರು ಯತಿದ್ವಯರಿಗೆ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ನೆರೆದ ಅಪಾರ ಜನಸ್ತೋಮ ಪಂಕ್ತಿಯಲ್ಲಿ ಆಗಮಿಸಿ ಸಂನ್ಯಾಸಿಗಳಿಗೆ ಪ್ರಣಾಮ ಸಲ್ಲಿಸಿದರು. ಸಂಜೆ ೫:೩೦ ವೇಳೆಗೆ ಈರ್ವರೂ ಸಂನ್ಯಾಸಿಗಳನ್ನು ಮೆರವಣಿಗೆಯಲ್ಲಿ ಟೌನ್ ಹಾಲ್‌ಗೆ ಕರೆತರಲಾಯಿತು. ಮೆರವಣಿಗೆಯು ದಿವಾನ್ ರಸ್ತೆ, ರಮಾವಿಲಾಸ ರಸ್ತೆ ಹಾಗೂ ಲ್ಯಾನ್ಸ್‌ಡೌನ್ ರಸ್ತೆಯ ಮೂಲಕ ಸಾಗಿ ಟೌನ್‌ಹಾಲ್ ತಲುಪಿತು. ವಿದ್ಯಾರ್ಥಿ ಸಮುದಾಯವು ತಾವಾಗಿಯೇ ಮುಂದೆ ಬಂದು ಕುದುರೆಗಳನ್ನು ಬಿಡಿಸಿ, ರಥವನ್ನು ಮೆರವಣಿಗೆಯಲ್ಲಿ ಎಳೆದು ತಂದರು. ತದನಂತರ ಅಭೇದಾನಂದರಿಗೆ ಬಿನ್ನವತ್ತಳಿಕೆಯನ್ನು ಸಲ್ಲಿಸಲಾಯಿತು. ಇದಾದ ತರುವಾಯ ಅಭೇದಾನಂದರು Glory and Relevance of Vedanta ಎಂಬ ವಿಷಯವನ್ನು ಕುರಿತಾಗಿ ಉಪನ್ಯಾಸ ನೀಡಿದರು.

ಗುರುವಾರ, ೧೯೦೬ರ ಆಗಸ್ಟ್ ೯ರಂದು ಅಭೇದಾನಂದರು ಶ್ರೀ ಮಹಾದೇವ ಶಾಸ್ತ್ರಿ, ಶ್ರೀ ಪುಂಡಿ ಕಸ್ತೂರಿರಂಗಮ್ ಹಾಗೂ ಇತರ ಪಂಡಿತರೊಂದಿಗೆ ಅನೌಪಚಾರಿಕವಾದ ಚರ್ಚೆಯಲ್ಲಿ ಪಾಲ್ಗೊಂಡರು. ಮಾರನೆಯ ದಿನ, ಮೈಸೂರಿನ ಸಂಸ್ಕೃತ ಕಾಲೇಜಿಗೆ ಭೇಟಿ ನೀಡಿದರು. ಅಲ್ಲಿ ಹಿಂದೂ ವಿದ್ಯಾರ್ಥಿಗಳು ಸಾಮಗಾನ ಪಠಣ ಮಾಡಿದರು. ಕಾಲೇಜಿನ ಪ್ರಸಿದ್ಧ ಹಿಂದೂ ಜ್ಯೋತಿಷಿಗಳು ಅಭೇದಾನಂದರನ್ನು ಅಭಿನಂದಿಸಿ ಸಂಸ್ಕೃತದಲ್ಲಿ ಒಂದು ಶ್ಲೋಕ ರಚಿಸಿ ಅದರ ವಾಚನ ಮಾಡಿದರು.

೧೧ನೆ ತಾರಿಖು ಸ್ವಾಮಿ ಅಭೇದಾನಂದರು ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿ ಮಠಕ್ಕೆ ಭೇಟಿ ನೀಡಿದರು. ೧೧ರಂದು ಶ್ರೀರಂಗಪಟ್ಟಣಕ್ಕೆ ತೆರಳಿದರು. ಅಲ್ಲಿಯ ಸಾರ್ವಜನಿಕರು ಹಾಗೂ ವಿವೇಕಾನಂದ ಸೊಸೈಟಿಯ ಸದಸ್ಯರುಗಳು ಹಾರ, ತುರಾಯಿ ಹಾಗೂ ವಾದ್ಯಘೋಷಗಳೊಂದಿಗೆ ಅಭೇದಾನಂದರಿಗೆ ಸ್ವಾಗತ ಕೋರಿದರು. ರಂಗನಾಥ ಸ್ವಾಮಿಯ ದರ್ಶನದ ತರು

ವಾಯ ಸ್ವಾಮೀಜಿ ಸಭಿಕರನ್ನುದ್ದೇಶಿಸಿ ವೇದಾಂತ ಕುರಿತಾಗಿ ಚುಟುಕಾದ ಆದರೆ ಅತ್ಯಂತ ಪ್ರಭಾವಶಾಲಿಯಾದ ಭಾಷಣ ಮಾಡಿದರು. ತದನಂತರ ಟಿಪ್ಪು ಸುಲ್ತಾನನ ಕೋಟೆ ಹಾಗೂ ಇತರ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿದರು. ಮೈಸೂರಿಗೆ ಹಿಂದಿರುಗಿ ಬಂದು ರಾಮಕೃಷ್ಣಾನಂದರ ಜೊತೆಗೂಡಿ ಅರಮನೆಗೆ ತೆರಳಿ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರನ್ನು ಹಾಗೂ ಇನ್ನಿತರ ಅಧಿಕಾರಿ ವರ್ಗದವರನ್ನು ಭೇಟಿ ಮಾಡಿದರು. ಮಹಾರಾಜರು ತಮ್ಮ ಸಿಂಹಾಸನವನ್ನು ಬಿಟ್ಟು, ಯತಿಗಳಿಗಾಗಿ ಹಾಕಿದ್ದ ಆಸನದ ಬಳಿ ಇದ್ದ ಜಮಖಾನೆಯ ಮೇಲೆ ಹೋಗಿ ಕುಳಿತರು. ಇಲ್ಲಿ ಅಭೇದಾನಂದರು ಆಂಗ್ಲ ಭಾಷೆಯಲ್ಲಿ ಕಿರಿದಾದ ಉಪನ್ಯಾಸ ಮಾಡಿದರು. ತರುವಾಯ ಪಂಡಿತರುಗಳು ಸಂಸ್ಕೃತದಲ್ಲಿ ಪ್ರಶ್ನೆ ಕೇಳಿದರೆ, ಅಭೇದಾನಂದರು ಆಂಗ್ಲ ಭಾಷೆಯಲ್ಲಿಯೇ ಉತ್ತರಿಸುತ್ತಿದ್ದರು. ಏಕೆಂದರೆ ಸಭೆಯಲ್ಲಿನ ಬಹುತೇಕ ಜನರಿಗೆ ಸಂಸ್ಕೃತ ಬರುತ್ತಿರಲಿಲ್ಲ. ಈ ಪ್ರಶ್ನೋತ್ತರ ಕಾರ್ಯಕ್ರಮ ಸುಮಾರು ೨ಗಂಟೆ ೩೦ ನಿಮಿಷಗಳ ಕಾಲ ಜರುಗಿತು. ಇದಾದ ತರುವಾಯ ಮಹಾರಾಜರು ಯತಿವರ್ಯರ ಕೊರಳಿಗೆ ಮಾಲೆ ಹಾಕಿ ತಮ್ಮ ಗೌರವ ಸಲ್ಲಿಸಿದರು.

೧೨ನೇ ತಾರಿಖು, ಭಾನುವಾರ ಅಭೇದಾನಂದರು ಟೌನ್ ಹಾಲ್‌ನಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾದ ಉಪನ್ಯಾಸ ಮಾಡಿದರು. ಸಾವಿರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಸಭಾಂಗಣವು ವಿದ್ಯಾರ್ಥಿಗಳಿಂದ ಭರ್ತಿಯಾಗಿತ್ತು. ಶ್ರೀ ದಿವಾನ್ ಬಹದ್ದೂರ್ ಅವರು ಸಭಾಧ್ಯಕ್ಷತೆಯನ್ನು ವಹಿಸಿ, ಸ್ವಾಮೀಜಿಯ ಪರಿಚಯ ಭಾಷಣ ಮಾಡಿದರು.

೧೯೦೬ರ ಆಗಸ್ಟ್ ೨೦ರಂದು ಅಭೇದಾನಂದರು ಬೆಂಗಳೂರಿನ ಈಗಿರುವ ರಾಮಕೃಷ್ಣ ಆಶ್ರಮದ ಕಟ್ಟಡ ನಿರ್ಮಾಣದ ಅಡಿಪಾಯದ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪೆಟ್ಟಿಗೆಯಲ್ಲಿ ಒಂದು ಇಂಚು ಗಾತ್ರದ ಭಗವದ್ಗೀತೆಯ ಪುಸ್ತಕ, ಭಗವಾನ್ ಶ್ರೀ ರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ಭಾವಚಿತ್ರ, ಪಂಚಲೋಹ ಹಾಗೂ ಇನ್ನಿತರ ಪವಿತ್ರ ಸಾಮಗ್ರಿಗಳನ್ನು ಇಟ್ಟು, ಆ ಪೆಟ್ಟಿಗೆಯನ್ನು ಅಡಿಪಾಯದ ಕಲ್ಲಿನ ಕೆಳಗೆ ಸ್ಥಾಪಿಸಲಾಯಿತು. ತರುವಾಯ ಅಭೇದಾನಂದರು ಒಂದು ಪುಟ್ಟ ಉಪನ್ಯಾಸ ಮಾಡಿದರು. ಮಂಗಳಾರತಿಯೊಂದಿಗೆ ಕಾರ್ಯಕ್ರಮ ಪೂರ್ಣಗೊಂಡಿತು.

### ಸ್ವಾಮಿ ವಿಜ್ಞಾನಾನಂದರು

ಶ್ರೀರಾಮಕೃಷ್ಣ ನೇರಶಿಷ್ಯರು ಹಾಗೂ ರಾಮಕೃಷ್ಣ ಮಹಾಸಂಘದ ೪ ನೆ ಅಧ್ಯಕ್ಷರಾದ ಸ್ವಾಮಿ ವಿಜ್ಞಾನಾನಂದರು ೧೯೩೧ರಲ್ಲಿ ಮೈಸೂರಿಗೆ ಭೇಟಿ ನೀಡಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಸ್ವಾಮೀಜಿಯ ಪೂರ್ವಾಶ್ರಮದಲ್ಲಿ ಅವರ ಕಾಲೇಜಿನ ಸಹಪಾಠಿಯಾಗಿದ್ದರು. ಈರ್ವರೂ ಪುಣೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದ್ದರು.

ವಿಜ್ಞಾನಾನಂದರು ರೈಲಿನ ಮೂಲಕ ಬೆಳಿಗ್ಗೆ ಮೈಸೂರಿಗೆ ಬಂದಿಳಿದರು. ಸಂಪೂರ್ಣ ದಿನವನ್ನು ಅವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಕಳೆದರು. ಸಂಜೆ ೬ ಗಂಟೆಯ ಹೊತ್ತಿಗೆ ತಾಯಿ



ಚಾಮುಂಡೇಶ್ವರಿಯ ದರ್ಶನಕ್ಕೆ ತೆರಳಿದರು. ೭ ಗಂಟೆಗೆ ಪುನಃ ಆಶ್ರಮಕ್ಕೆ ಹಿಂದಿರುಗಿದರು. ಅಂದೇ ರಾತ್ರಿ ೧೦:೩೦ಕ್ಕೆ ಅವರು ಬೆಂಗಳೂರಿಗೆ ಹಿಂದಿರುಗಿದರು.

### ಸಂಕ್ಷಿಪ್ತ ವಿವರಣೆ

**೧೮೯೨:** ಸ್ವಾಮಿ ವಿವೇಕಾನಂದರ ಕರ್ನಾಟಕ ಭೇಟಿ.

**೧೯೦೩ರ ಜುಲೈ ೧೯ರಿಂದ ೧೯೦೩ರ ಆಗಸ್ಟ್ :** ರಾಮಕೃಷ್ಣಾನಂದರು ಬೆಂಗಳೂರಿಗೆ ಹಾಗೂ ಮೈಸೂರಿಗೆ ಮೊದಲ ಬಾರಿಗೆ ಆಗಮಿಸಿದರು.

**೧೯೦೬ರ ಜುಲೈ ೨೯ರಿಂದ – ಆಗಸ್ಟ್ ೨೦ :** ಸ್ವಾಮಿ ಅಭೇದಾನಂದರು ಹಾಗೂ ರಾಮಕೃಷ್ಣಾನಂದರು ಬೆಂಗಳೂರು, ಮೈಸೂರು, ಶೃಂಗೇರಿ ಮಠ, ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದರು. ಇದು ಬೆಂಗಳೂರಿಗೆ ರಾಮಕೃಷ್ಣಾನಂದರ ಎರಡನೇ ಭೇಟಿ.

**೧೯೦೬ರ ಆಗಸ್ಟ್ ೨೦:** ಸ್ವಾಮಿ ಅಭೇದಾನಂದರು ಬೆಂಗಳೂರಿನ ರಾಮಕೃಷ್ಣ ಆಶ್ರಮದ ಕಟ್ಟಡಕ್ಕೆ ಅಡಿಪಾಯ ಹಾಕಿದ್ದು.

**೧೯೦೮ ಮೇ :** ಸೋದರಿ ದೇವಮಾತಾರೊಂದಿಗೆ ಬೆಂಗಳೂರಿಗೆ ರಾಮಕೃಷ್ಣಾನಂದರ ಮೂರನೆಯ ಭೇಟಿ. ಬೆಂಗಳೂರು ಆಶ್ರಮದ ನಿರ್ಮಾಣಕ್ಕಾಗಿ ಧನ ಸಂಗ್ರಹ ಮಾಡಿದುದು.

**೧೯೦೯ರ ಜನವರಿ :** ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರೊಂದಿಗೆ ಬೆಂಗಳೂರಿಗೆ ನಾಲ್ಕನೆಯ ಬಾರಿ ರಾಮಕೃಷ್ಣಾನಂದರ ಭೇಟಿ. ಇದು ಬೆಂಗಳೂರಿಗೆ ಬ್ರಹ್ಮಾನಂದರ ಪ್ರಥಮ ಭೇಟಿ.

**೧೯೦೯ರ ಜನವರಿ ೨೦ :** ಬ್ರಹ್ಮಾನಂದರಿಂದ ಬೆಂಗಳೂರಿನ ಆಶ್ರಮದ ಕಟ್ಟಡದ ಉದ್ಘಾಟನೆ ಜರುಗಿತು.

**೧೯೧೦ರ ಆಗಸ್ಟ್ :** ಬೆಂಗಳೂರಿಗೆ ರಾಮಕೃಷ್ಣಾನಂದರ ಐದನೆಯ ಭೇಟಿ.

**೧೯೧೧ರ ಮಾರ್ಚ್-೨೪ :** ಬೆಂಗಳೂರಿಗೆ ಶ್ರೀಮಾತೆ ಶಾರದಾ ದೇವಿಯವರೊಂದಿಗೆ ರಾಮಕೃಷ್ಣಾನಂದರ ಆರನೆಯ ಭೇಟಿ.

**೧೯೧೬ರ ಜುಲೈ ೨೧ :** ಬ್ರಹ್ಮಾನಂದರು ಕಲ್ಕತ್ತದಿಂದ ಮದ್ರಾಸ್ ಮುಖಾಂತರ ಬೆಂಗಳೂರಿಗೆ ಹೊರಟರು. ಆ ಸಂದರ್ಭದಲ್ಲಿ ಮೈಸೂರು ಹಾಗೂ ಮೇಲುಕೋಟೆಗೆ ಭೇಟಿ ನೀಡಿದರು.

**೧೯೧೬ರ ಆಗಸ್ಟ್ ೧೨:** ಬ್ರಹ್ಮಾನಂದರು ಎರಡನೆಯ ಬಾರಿಗೆ ಬೆಂಗಳೂರಿಗೆ ಆಗಮಿಸುತ್ತಾರೆ.

**೧೯೨೧ರ ಜೂನ್ ೧೪ :** ಬ್ರಹ್ಮಾನಂದರು ಮೂರನೆಯ ಬಾರಿಗೆ ಬೆಂಗಳೂರಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ಸ್ವಾಮಿ ಶಿವಾನಂದರು ಅವರೊಂದಿಗೆ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿದ್ದರು. ಬಳಿ ಶಿವಾನಂದರು ಮೈಸೂರಿಗೆ ತೆರಳಿ ಚಾಮುಂಡೇಶ್ವರಿಯ ದರ್ಶನ ಪಡೆದರು.

**೧೯೨೪ರ ಜುಲೈ :** ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ಶಿವಾನಂದರು ಬೆಂಗಳೂರಿಗೆ ಎರಡನೆಯ ಬಾರಿ ಭೇಟಿ ನೀಡಿದರು.

**೧೯೩೧:** ಸ್ವಾಮಿ ವಿಜ್ಞಾನಾನಂದರು ಮೈಸೂರು ಹಾಗೂ ಬೆಂಗಳೂರಿಗೆ ಬಂದರು.

## ಉಪಸಂಹಾರ

ನಾರದರು ತಮ್ಮ ಭಕ್ತಿಸೂತ್ರದಲ್ಲಿ **'ತೀರ್ಥೀಕುರ್ವಂತಿ ತೀರ್ಥಾನಿ'** ಎನ್ನುತ್ತಾರೆ. ಎಂದರೆ ಬ್ರಹ್ಮಜ್ಞಾನಿಗಳು ತಾವು ಹೋದ ಸ್ಥಳವನ್ನೇ ತೀರ್ಥಕ್ಷೇತ್ರವನ್ನಾಗಿಸುತ್ತಾರೆ ಎಂದರ್ಥ. ಶ್ರೀರಾಮಕೃಷ್ಣರ ಶಿಷ್ಯರೆಲ್ಲರೂ ಬ್ರಹ್ಮಜ್ಞಾನಿಗಳೇ. ಅವರಲ್ಲಿ ೬ ಜನ ಶಿಷ್ಯರು ಕರ್ನಾಟಕಕ್ಕೆ ಭೇಟಿಯಿತ್ತು, ಈ ಭಾಗವನ್ನು ಪುನೀತರನ್ನಾಗಿಸಿದ್ದಾರೆ. ಇಂದು ನಾವು ಯಾವ ಶ್ರೀರಾಮಕೃಷ್ಣ ಭಾವಧಾರೆಯ ಪ್ರವಾಹವನ್ನು ಕನ್ನಡ ನೆಲದಲ್ಲಿ ಕಾಣುತ್ತಿರುವೆವೋ, ಅದಕ್ಕೆ ಈ ಯತಿವರ್ಯರುಗಳ ಭೇಟಿಯೇ ಪ್ರಧಾನ ಕಾರಣವಾಗಿದೆ. ಇವರುಗಳ ಅನುಗ್ರಹ ಕನ್ನಡ ಜನತೆಗೆ ಅನವರತ ದೊರೆಯುತ್ತಿರಲಿ ಎಂದು ಪ್ರಾರ್ಥಿಸುತ್ತ ಲೇಖನವನ್ನು ಪೂರ್ಣಗೊಳಿಸುತ್ತಿದ್ದೇನೆ. ❋

### *ಆಕರ ಗ್ರಂಥಗಳು:*


*೧. **A Spiritual Center Blossoms, First 100 years** (1904 - 2004), Ramakrishna Math, Bangalore. By M. S. Nanjundiah, First edition April 2007.*

*೨. Article Title: **Direct Disciples of Sri Ramakrishna in Mysore** (Pioneers of the Ramakrishna Movement), Published in **Amrita Varsha**, Author: Swami Muktidananda.*



Vishwas *Means*
Faith - Trust
*Contact Always*



NALLUR
VISHWAS JEWELLERS

* Gold * Silver * Gems * Diamonds
An Exclusive Show Room for 916 KDMB jewellery
# 761, Near Clock Tower, V. L. Road, Davangere - 577 001
Ph: 08912 - 254476, 232746, 94834 53767
e-mail: nallurvishwas@gmail.com